# ನಿದ್ರೆಗೆ ಭಂಗ ತರದಿರಿ

ಮುಗಿಯಿತು ಮದುವೆ ಎಂಬ ಸಂಭ್ರಮ
ಇನ್ನೇನು ಹೊರಡುತ್ತಾಳೆ ಮದುಮಗಳು
ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಓಡಾಡುತ್ತಿದ್ದವಳು
ಅಕ್ಕಿ ತುಂಬಿದ ಸೇರನೊದ್ದು
ಬೆಳಗಲನುವಾಗಿದ್ದಾಳೆ ಆ ಮನೆಯನು

'ಅಪ್ಪ ಎಲ್ಲಿ' ಎಂಬ ಅವಳ ಪ್ರಶ್ನೆಗೆ
ಯಾರೋ ಉತ್ತರಿಸುತ್ತಿದ್ದಾರೆ.
ಪಾಪ ನಿಮ್ಮಪ್ಪನಿಗೆ ಸುಸ್ತಾಗಿರಬೇಕು
ಮೂಲೆಯೊಂದರಲ್ಲಿ ಕಾಲು ಚಾಚಿ
ಸಣ್ಣ ನಿದ್ದೆ ತೆಗೆಯುತ್ತಿದ್ದಾನೆಂದು

ಮುಖದ ಮೇಲೆ ಹೊದ್ದ ವಸ್ತ್ರದ ಹಿಂದೆ
ಬಿಕ್ಕುತ್ತಿದ್ದೇನೆ ಮೌನವಾಗಿ
ಒಂದರ ಮೇಲೊಂದು ಇಟ್ಟ ಕುರ್ಚಿಗಳಂತೆ
ಅವಳ ನೆನಪುಗಳಿವೆ ಎದೆಯಾಳದಲ್ಲಿ
ಮತ್ತವಳದೇ ಎಳೆಗರುವಿನದನಿ 'ಅಪ್ಪ ಎಲ್ಲಿ?'

ಬೇಡ ಮಗಳೆ ನೀನಿತ್ತ ಬರಬೇಡ
ನನ್ನ ದುಃಖದ ಕಟ್ಟೆಯ
ಒಡೆದು ಹೋಗಬೇಡ
ಹಾಗೇ ಹೊರಟು ಹೋಗಿಬಿಡು
ಅಪ್ಪನ ನಿದ್ದೆಗೆ ಭಂಗ ತರದೆ.

● **ಗೌರಿ ಚಂದ್ರಕೇಸರಿ**

# ಮುಖ ಮರೆತವನು

ನನ್ನ ಗುರುತು ನಿಮಗಿಲ್ಲ
ಚಿಂತೆ ಇಲ್ಲದವನು ಸಂತೆಯಲ್ಲಿ
ನಿದ್ದೆ ಮಾಡಿದನಂತೆ
ಅಯ್ಯೋ ದಣಿದು ಹೋಗಿದ್ದೇನೆ
ಹಗಲುರಾತ್ರಿಯೆಲ್ಲಾ ದುಡಿದು
ಈ ಬಿಸಿಲು ಜಳ ದೂಳಿನಲ್ಲಿ
ಎಲ್ಲರಿಗೂ ಕುರ್ಚಿ ಹಾಕಿ
ಪೆಂಡಾಲ್ ಹೊಡೆದು ಮೈಕಿಟ್ಟು
ಹಿಂದೆ ಕುಳಿತ ನಾನು
ಮುಖ ಮರೆತವನು

ಎಷ್ಟೋ ಸಭೆ ಸಮಾರಂಭಗಳ
ಮದುವೆ ಮುಂಜಿಗಳ ಕಂಡವನು ನಾನು
ಹೊತ್ತೊಯ್ಯಬೇಕು ಊರಿಂದೂರಿಗೆ



ಸಿಕ್ಕರೆ ಸಾಕು ಸಮಯ ನಡುವೆ
ಕಾಲು ಚಾಚಲು ಕುರ್ಚಿಯೇ ಪಲ್ಲಂಗವಾಗಿ
ಕರವಸ್ತ್ರವೇ ಹೊದಿಕೆಯಾಗಿ
ಒಂದು ಸಣ್ಣ ನಿದ್ರೆ

ದುಡಿಯಬೇಕು ಸಮಯ ಬಂದಾಗ
ಜಗದ ನಿಯಮವೇ ಹಾಗೆ
ಕೆಲಸದ ನಡುವೆಯೇ ನಿದ್ದೆ
ರಾತ್ರಿಯೇ ಆಗಬೇಕಿಲ್ಲ
ಹಾಸಿಗೆ ಹೊದಿಕೆಯೂ ಬೇಕಿಲ್ಲ
ಇಂತಹ ನಿದ್ದೆಯಲ್ಲೇ
ನನ್ನನ್ನು ನಾನು ಮರೆತವನು

● **ಡಾ. ವಿ.ಕೆ. ಸಂಕನಗೌಡರ**